ಮಗಳಾಗಿರಬೇಕು, ಅತ್ಯಂತ ಚೆಲುವೆಯಾಗಿರಬೇಕು ಹಾಗೂ ತುಂಬಾ ಓದಿದವಳಾಗಿರಬೇಕು. ಹೀಗಿರಲು, ದೂರದ ಹಾಗೂ ಸಮೀಪದ ಮದುವೆಯ ಪ್ರಸ್ತಾಪಗಳ ಸುರಿಮಳೆಯಾಗತೊಡಗಿತ್ತು. ಕೆಲವರು ದೊಡ್ಡ ಮೊತ್ತದ ವರದಕ್ಷಿಣೆ ನೀಡಲೂ ಸಿದ್ಧವಾಗಿದ್ದರು. ನಾನು ಎಲ್ಲ ಪ್ರಸ್ತಾಪಗಳನ್ನು ಕಟ್ಟುನಿಟ್ಟಿನ ತಾರತಮ್ಯವಿರದ ನನ್ನ ದೃಷ್ಟಿಕೋನದ ತಕ್ಕಡಿಯಲ್ಲಿ ತೂಗಿ ನೋಡಿದೆ. ಆದರೆ ನನ್ನ ಬಾಳ ಸಂಗಾತಿಯಾಗಲು ಯಾರೂ ಅರ್ಹರೆನಿಸಲಿಲ್ಲ.

ಕವಿ ಭವಭೂತಿಯ ಸಾಲುಗಳು ನನಗೆ ಮನವರಿಕೆ ಮಾಡಿಕೊಟ್ಟವು.

"ಈ ಜಗದ ಅನಂತ ಕಾಲ ಹಾಗೂ ಅಸೀಮ ಅವಕಾಶದಲಿ ದೈವಾಣತಿಯಂತೆ ನನಗೆ ಅನುರೂಪಳಾದವಳೊಬ್ಬಳು ಜನಿಸಿರಬಹುದಲ್ಲ!"

ಆದರೆ ಈ ಪುಟ್ಟ ಹೊಸಯುಗದಲ್ಲಿ ಹಾಗೂ ಹೊಸ ಬಂಗಾಲದ ಈ ಇಕ್ಕಟ್ಟಾದ ಜಾಗೆಯಲ್ಲಿ, ಯಾರಿಗೂ ಸರಿಸಾಟಿಯಿರದ ಒಂದು ಹೆಣ್ಣುಜೀವ ನನಗಾಗಿ ಅವತರಿಸಿದೆಯೊ ಇಲ್ಲವೊ ಎಂಬುದೇ ಸಂದೇಹಾಸ್ಪದವಾಗಿತ್ತು.

ಏತನ್ಮಧ್ಯೆ, ಹೊಂಚು ಹಾಕಿ ಕುಳಿತ ಹೆಣ್ಣು ಹೆತ್ತವರು, ಭಿನ್ನ ಭಿನ್ನ ಸ್ವರಗಳಲ್ಲಿ ಹಾಗೂ ಲಯಗಳಲ್ಲಿ ಹಾಡುತ್ತಿದ್ದ ನನ್ನ ಗುಣಗಾನ ಅಲ್ಲಲ್ಲಿ ಕೇಳಿ ಬರುತ್ತಲೇ ಇತ್ತು.

ಅವರ ಪುತ್ರಿಯರು ನನಗೆ ಇಷ್ಟವಾದರೊ, ಇಲ್ಲವೊ, ಆದರೆ ಅವರನ್ನು ಹೆತ್ತವರು ನನಗೆ ಸಲ್ಲಿಸುತ್ತಿದ್ದ ಆರಾಧನೆ ನನ್ನನ್ನು ಮುದಗೊಳಿಸುತ್ತಿತ್ತು. ನಾನು ತುಂಬ ಒಳ್ಳೆಯ ಹುಡುಗ ಎಂಬ ಕಾರಣಕ್ಕಾಗಿಯೇ ನನಗೆ ಅಂಥ ಮರ್ಯಾದೆ ಸಿಗುತ್ತಿತ್ತು. ರೂಢಿಗತ ನಂಬಿಕೆಯಂತೆ, ದೇವರುಗಳು ಭವಿಗಳಿಗೆ ವರ ನೀಡದೇ ಇದ್ದಾಗ, ಅವರು ಆರಾಧಕರಿಂದ ಉತ್ಕಟ ಭಕ್ತಿ–ಗೌರವವನ್ನು ಅಪೇಕ್ಷಿಸುತ್ತಿದ್ದರು. ಇಲ್ಲದಿದ್ದರೆ ಅವರು ಕೋಪಾವಿಷ್ಟರಾಗುತ್ತಿದ್ದರು. ಅಂಥ ಒಂದು ದಿವ್ಯಾರಾಧನೆಯ ಬಯಕೆ ನನ್ನಲ್ಲಿ ಬಲವಾಗಿ ಬೆಳೆದು ಬಿಟ್ಟಿತ್ತು.

ನಾನು ಈ ಮೊದಲೇ ಹೇಳಿದಂತೆ ಠಾಕೂರ ದಾದಾನಿಗೆ ಒಬ್ಬಳೇ ಒಬ್ಬಳು ಮೊಮ್ಮಗಳಿದ್ದಳು. ನಾನು ಅವಳನ್ನು ಎಷ್ಟೋ ಸಲ ನೋಡಿದ್ದೆ. ಆದರೆ ಆಕೆ ಚೆಲುವೆಯಾಗಿದ್ದಾಳೆಂದು ನಾನೆಂದೂ ಭಾವಿಸಿರಲಿಲ್ಲ. ಅವಳು ನನ್ನ ಓರ್ವ ಭಾವಿ ಜೀವನ ಸಂಗಾತಿಯಾಗಬಹುದೆಂಬ ವಿಚಾರವಂತೂ ನನ್ನೊಳಗೆ ತಪ್ಪಿಯೂ ಸುಳಿದಿರಲಿಲ್ಲ. ಎಲ್ಲರಂತೆ, ಒಂದಿಲ್ಲೊಂದು ದಿನ ಕೈಲಾಸ ಬಾಬು ಅತ್ಯಂತ ವಿನೀತ ಭಾವದಿಂದ ನನ್ನ ಪವಿತ್ರ ಪೀಠಕ್ಕೆ ನೈವೇದ್ಯ ಸಲ್ಲಿಸುವಂತೆ, ತನ್ನ ಮಗಳನ್ನು ನನಗೆ ಕೊಡುವ ಪ್ರಸ್ತಾಪ ಮಾಡೇ ಮಾಡುತ್ತಾನೆಂಬ ಖಚಿತ ವಿಶ್ವಾಸ ನನಗಿತ್ತು. ಆದರೆ ಇದುವರೆಗೆ ಆತ ಅಂಥ ಪ್ರಸ್ತಾಪ ಮಾಡಲಿಲ್ಲ ಎಂಬ ಸಂಗತಿಯೇ ನನ್ನನ್ನು ಇಡಿಯಾಗಿ ಪೀಡಿಸುತ್ತಿತ್ತು. ನಿಜಕ್ಕೂ ನಾನು ಆತನನ್ನು ಇಷ್ಟಪಡದಿರುವ ರಹಸ್ಯ ಕೂಡ ಅದೇ ಆಗಿತ್ತು.

ನಯಾಂಜೋರದ ಬಾಬುಗಳು ಯಾರೊಬ್ಬರ ವರದಾನಕ್ಕಾಗಿ ಅಂಗಲಾಚುತ್ತಿರಲಿಲ್ಲ ಎಂದು ಆತ ತನ್ನ ಗೆಳೆಯರ ಮುಂದೆ ಹೇಳಿಕೊಂಡಿದ್ದನ್ನು ನಾನು ಕೇಳಿದ್ದೆ. ಹುಡುಗಿಗೆ ಲಗ್ನವಾಗದಿದ್ದರೂ ಚಿಂತೆಯಿಲ್ಲ ಆದರೆ ಮನೆತನದ ಪರಂಪರೆಯನ್ನು ಆತ ಮುರಿಯುತ್ತಿರಲಿಲ್ಲ. ಆತನ ಈ ಒಣ ಜಂಭವೇ ನನ್ನನ್ನು ಸಿಟ್ಟಿಗೆಬ್ಬಿಸಿತ್ತು. ನನ್ನ ಆ ಪ್ರಕೋಪ ನನ್ನನ್ನು ಒಳಗೊಳಗೇ ದಹಿಸುತ್ತಿತ್ತು. ಆದರೆ ನಾನು ಸುಮ್ಮನಿದ್ದು ಎಲ್ಲವನ್ನೂ ತಾಳ್ಮೆಯಿಂದ ಸಹಿಸಿಕೊಂಡಿದ್ದೆ. ಏಕೆಂದರೆ ನಾನು ತುಂಬ ಒಳ್ಳೆಯ ವ್ಯಕ್ತಿಯಾಗಿದ್ದೆ.

ಮಿಂಚು ಸಿಡಿಲಿನ ಜೊತೆಗೂಡಿದಂತೆ, ನನ್ನೊಳಗಿನ ಹಾಸ್ಯಪ್ರಜ್ಞೆ, ನನ್ನೊಳಗಿನ ಪ್ರಕೋಪದ ಗೊಣಗಾಟದೊಡನೆ ಬೆರೆತುಕೊಂಡಿತು. ಕೇವಲ ನನ್ನೊಳಗಿದ್ದ ಆಕ್ರೋಶವನ್ನು ಹೊರಹಾಕಲೆಂದು, ಆ ಮುದುಕನನ್ನು ಶಿಕ್ಷಿಸುವುದು ನನ್ನ ಮಟ್ಟಿಗೆ ಅಸಾಧ್ಯದ ಸಂಗತಿಯಾಗಿತ್ತು. ಎಷ್ಟೋ ದಿನಗಳವರೆಗೆ